# ಕಾಮಿಡಿಪ್ರಿಯೆ ಧನು ಹರ್ಷ

**‘ಎಡಗೈಯೇ ಅಪಘಾತಕ್ಕೆ ಕಾರಣ’ ಚಿತ್ರದ ಮೂಲಕ ಸಿನಿಮಾರಂಗದ ಕದ ತಟ್ಟಿದ ನಟಿ ಧನು ಹರ್ಷ, ರಂಗಭೂಮಿಯ ಹಿನ್ನೆಲೆಯವರು. ನಾಟಕಗಳ ಮುಖಾಂತರ ಅಭಿನಯದ ರುಚಿ ಹತ್ತಿಸಿಕೊಂಡ ಅವರೀಗ ಕನ್ನಡದ ಮತ್ತೆರಡು ಸಿನಿಮಾಗಳಿಗೆ ಬಣ್ಣ ಹಚ್ಚುತ್ತಿದ್ದಾರೆ.**

■ ಸುಮಲತಾ ಎನ್‌.



ಪದವಿ ಓದುವಾಗಲೇ ಸಿನಿಮಾರಂಗಕ್ಕೆ ಕಾಲಿಟ್ಟ ನಟಿ ಧನು ಹರ್ಷ, ‘ಎಡಗೈಯೇ ಅಪಘಾತಕ್ಕೆ ಕಾರಣ’ ಸಿನಿಮಾ ಮೂಲಕ ಚಿತ್ರರಂಗಕ್ಕೆ ಪರಿಚಿತರಾದರು. ಸದ್ಯ ಕನ್ನಡದ ಮತ್ತೆರಡು ಸಿನಿಮಾಗಳಲ್ಲಿ ನಟಿಸುತ್ತಿದ್ದು, ತಮ್ಮನ್ನು ಹಲವು ಬಗೆಯ ಪಾತ್ರಗಳಲ್ಲಿ ಅನ್ವೇಷಿಸುವ ಪ್ರಯತ್ನದಲ್ಲಿದ್ದಾರೆ.

ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಪದವಿ ಓದುವಾಗ ಹತ್ತಿದ ನಾಟಕದ ನಂಟು ಅವರಿಗೆ ಅಭಿನಯ ಕಲೆಯಲ್ಲಿ ಆಸಕ್ತಿ ತಳೆಯುವಂತೆ ಮಾಡಿತು. ರಂಗತಂಡವೊಂದರ ಮುಖಾಂತರವೇ ಸಿನಿಮಾಗೂ ಅವಕಾಶ ಒದಗಿಬಂದಿತು. ಇದೀಗ ನಾಟಕಗಳು, ಟೆಲಿಫಿಲ್ಮ್, ಕಿರುಚಿತ್ರ, ಸಿನಿಮಾ, ಹೀಗೆ ಅಭಿನಯ ಕಲೆಯ ಹಲವು ಕವಲುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅವರಿಗೆ ಸಿನಿಮಾರಂಗದಲ್ಲಿ ಹೊಸ ಪ್ರಯೋಗಗಳನ್ನು ಮಾಡುವ ಹಂಬಲ.

ಎಮೋಟಿಕಾನ್ಸ್, ಥಿಯೇಟರ್, ಬಂಡುತ್ವಾಸ್, ವಿಮೂವ್ ಥಿಯೇಟರ್ ರಂಗತಂಡಗಳಲ್ಲಿ ನಾಟಕಗಳನ್ನು ಮಾಡುತ್ತಿದ್ದ ಅವರಿಗೆ ರಂಗಭೂಮಿಯ ಮೇಲೆ ವಿಶೇಷ ಅಕ್ಕರೆ. ಈಚೆಗೆ ಕಲರಿ, ಯಕ್ಷಗಾನ, ಮೋಹಿನಿಯಾಟ್ಟಂನಂಥ ಕಲಾಪ್ರಕಾರಗಳ ಮುಖಾಂತರ ಕಥೆ ಹೇಳುವ ಹೊಸ ರಂಗಪ್ರಯೋಗವನ್ನೂ ಮಾಡಿದ್ದು, ಆ ಭಿನ್ನ ಪ್ರಯೋಗಕ್ಕೆ ಮೆಚ್ಚುಗೆ ಗಳಿಸಿಕೊಂಡಿದ್ದಾರೆ.

‘ನಾಟಕರಂಗಕ್ಕೆ ಬರುವ ಮುಂಚೆ ನಾನು ಅಂತರ್ಮುಖಿಯಾಗಿದ್ದೆ. ರಂಗಭೂಮಿಗೆ ಬಂದ ಮೇಲೆ ನನ್ನಲ್ಲಿನ ಆತ್ಮವಿಶ್ವಾಸ ಹೆಚ್ಚಿತು. ನಾವು ಮಾತಾಡುವ ರೀತಿ, ಒಬ್ಬರ ಮುಂದೆ ನಮ್ಮನ್ನು ನಾವು ಪ್ರೆಸೆಂಟ್ ಮಾಡಿಕೊಳ್ಳುವ ಬಗೆ ಇವೆಲ್ಲವೂ ನಟನೆಯ ಅನುಭವದಿಂದಲೇ ಬಂದಿರುವುದು’ ಎಂದು ತಮ್ಮನ್ನು ರೂಪಿಸಿದ ರಂಗಭೂಮಿಯ ಕುರಿತು ಪ್ರೀತಿಯ ಮಾತುಗಳನ್ನಾಡುತ್ತಾರೆ ಧನು.

‘ಎಡಗೈಯೇ ಅಪಘಾತಕ್ಕೆ ಕಾರಣ’ ಸಿನಿಮಾ ಕೂಡ ಅವರ ಪಾಲಿಗೆ ಉತ್ತಮ ಅವಕಾಶವಾಗಿ, ಹೊಸ ಕನಸುಗಳನ್ನು ಚಿಗುರಿಸಿತು.

‘ಮೊದಲನೆಯ ಚಿತ್ರದಲ್ಲಿಯೇ ಒಳ್ಳೆಯ ತಂಡ ಸಿಕ್ಕಿತು. ಸಿನಿಮಾರಂಗದ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿತು. ಆ ಸಿನಿಮಾ ತಂಡದಲ್ಲಿ ಎಲ್ಲರೂ ತುಂಬಾ ಪ್ಯಾಷನೇಟ್ ಆಗಿದ್ದರು. ದಿಗಂತ್ ಅವರೊಂದಿಗೆ ನಟಿಸಿದ್ದು ಸುಂದರ ಅನುಭವ’ ಎಂದು ಸ್ಮರಿಸುತ್ತಾರೆ.

ಆ್ಯಕ್ಷನ್ ಮಾಸ್ ಸಿನಿಮಾಗಳೆಂದರೆ ತುಂಬಾ ಇಷ್ಟ ಎನ್ನುವ ಧನು ಅವರಿಗೆ, ‘ದಿ ಫ್ಯಾಮಿಲಿ ಮ್ಯಾನ್’ ಸಿನಿಮಾದಲ್ಲಿ ನಟಿ ಸಮಂತಾ ಪ್ರಭು ನಿರ್ವಹಿಸಿದಂಥ ಪಾತ್ರದಲ್ಲಿ ತಮ್ಮನ್ನು ಕಂಡುಕೊಳ್ಳುವ ನಿರೀಕ್ಷೆ. ಕಾಮಿಡಿ ಪಾತ್ರಗಳನ್ನೂ ಮಾಡುವ ಅಭಿಲಾಷೆ. ‘ನಾಟಕಗಳಲ್ಲಿ ಅಂಥ ಪಾತ್ರಗಳನ್ನು ಎಕ್ಸ್‌ಪ್ಲೋರ್ ಮಾಡಿದ್ದೇನೆ, ಸಿನಿಮಾಗಳಲ್ಲಿಯೂ ಹೊಸ ಹೊಸ ಪಾತ್ರಗಳನ್ನು ಅನ್ವೇಷಿಸಬೇಕಿದೆ’ ಎಂದು ನಗುತ್ತಾರೆ.

ಸದ್ಯ ಎಂಬಿಎ ಓದುತ್ತಿರುವ ಅವರು ಕಿರುಚಿತ್ರವೊಂದರಲ್ಲಿ ಅಭಿನಯಿಸಿದ್ದು, ಅದು ಸಿನಿಮೋತ್ಸವಗಳಲ್ಲಿ ಪ್ರದರ್ಶನಗೊಳ್ಳಲು ಸಿದ್ಧವಾಗಿದೆ. ಮತ್ತೆರಡು ಸಿನಿಮಾಗಳು ಮೂಡಿಬರುತ್ತಿವೆ. ■